ತಿರುಗಾಡುತ್ತಿದ್ದು, ಈಗ ಪೋಲೀಸ್ ಇಲಾಖೆಯವರು ಬೇಲಿ ಹಾಕಿರುವುದರಿಂದ ನಿವಾಸಿಗಳಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಸರ್ಕಾರ ಈ ಬಗ್ಗೆ ಯಾವ ಕ್ರಮವನ್ನು ಕೈಗೊಂಡಿಲ್ಲದಿರುವುದು ನಿಜವೇ?

ಇ) ಹಾಗಿದ್ದಲ್ಲಿ ಈ ಸಮಸ್ಯೆಯನ್ನು ನಿವಾರಿಸಲು ಕೈಗೊಂಡಿರುವ ಕ್ರಮಗಳಾವುವು?

ಶ್ರೀ ಆರ್.ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):

ಅ) ರಿಡ್ಜ್ ಹೌಸ್ ಹಿಂಭಾಗದಲ್ಲಿ ಮಳೆನೀರು ಹೋಗಲು ನಾಲೆಯೊಂದಿದ್ದು ಸದರಿ ರಿಡ್ಜ್ ಹೌಸನ್ನು ಮೈಸೂರು ನಗರದ ಪೊಲೀಸ್ ಕಮೀಷನರ್‌ರವರ ಅಧಿಕೃತ ನಿವಾಸ ಹಾಗೂ ಗೃಹಕಛೇರಿಗಾಗಿ ಉಪಯೋಗಿಸಿಕೊಳ್ಳಲು ದಿನಾಂಕ 16-6-93ರ ಸರ್ಕಾರೀ ಆದೇಶ ಸಂಖ್ಯೆ ಸಿ.ಅಸು.ಇ 11 ಶಿಅಎ 91ರಂತೆ ಅನುಮತಿಯಾಗಿದೆ. ತದನಂತರ ಭದ್ರತಾ ದೃಷ್ಟಿಯಿಂದ ರಿಡ್ಜ್‌ಹೌಸ್‌ನ ಸುತ್ತಲೂ ತಂತಿ ಬೇಲಿಯನ್ನು ಹಾಕಿಸಲಾಗಿದೆ. ಈ ರಿಡ್ಜ್‌ಹೌಸ್‌ನ ಆಸುಪಾಸಿನ ಜಾಗದಲ್ಲಿ ನಗರ ಪೊಲೀಸ್ ನಿಯಂತ್ರಣ ಕೊಠಡಿ, ನಗರದ ಹಿರಿಯ ಅಧಿಕಾರಿಗಳ ವಸತಿಸಂಕೀರ್ಣವನ್ನು ಗುರುತಿಸಲು ಪ್ರಸ್ತಾಪಿಸಲಾಗಿದೆ. ಗಾಯತ್ರಿಪುರಂ ನಿವಾಸಿಗಳಿಗೆ ಅತಿ ಸಮೀಪದಲ್ಲಿ ಪರ್ಯಾಯರಸ್ತೆಯಿದ್ದು ಯಾವ ತೊಂದರೆಯೂ ಆಗುವುದಿಲ್ಲ. ಆದುದರಿಂದ ಈ ರಿಡ್ಜ್‌ಹೌಸ್‌ನ ಆಸುಪಾಸಿನ ಜಮೀನಿನಲ್ಲಿ ಸಂಪರ್ಕರಸ್ತೆ ನಿರ್ಮಿಸುವ ಸಾಧ್ಯತೆ ಕಂಡುಬಂದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ವಕ್ಫ್ ಮಂಡಳಿಗೆ ನೀಡಿರುವ ಅನುದಾನ

24 (6)

ಶ್ರೀ ಡಿ.ಆರ್.ಪಾಟೀಲ್ (ಗದಗ್): ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994-95ರಿಂದ 1997-98ರವರೆಗಿನ ಆಯವ್ಯಯಗಳಲ್ಲಿ ವಕ್ಫ್ ಮಂಡಳಿಗೆ ನೀಡಿದ ಅನುದಾನ ಎಷ್ಟು? ಪ್ರತಿ ವರ್ಷ ಆದ ಖರ್ಚು ಎಷ್ಟು? (ವಿಧಾನಸಭಾ ಕ್ಷೇತ್ರವಾರು ಖರ್ಚಾದ ಮಾಹಿತಿಯನ್ನು ನೀಡುವುದು)

ಶ್ರೀ ಆರ್.ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):

ಅ) ವಕ್ಫ್ ಸಂಸ್ಥೆಗಳಿಗೆ ಅನುದಾನವನ್ನು ಮಂಜೂರು ಮಾಡುವುದು ವಕ್ಫ್ ಸಂಸ್ಥೆಗಳ

ಆಧಾರವೇ ಹೊರತು ವಿಧಾನ ಸಭಾ ಕ್ಷೇತ್ರದ ಮೇರೆಗೆ ಅಲ್ಲ. ಸರ್ಕಾರವು ವಕ್ಫ್ ಮಂಡಳಿಗೆ ನಿಗಧಿಪಡಿಸಿದ ಅನುದಾನ ಮತ್ತು ರಾಜ್ಯದ ವಿವಿಧ ವಕ್ಫ್ ಸಂಸ್ಥೆಗಳಿಗೆ ವಕ್ಫ್ ಬೋರ್ಡ್‌ನಿಂದ ಮಂಜೂರಾದ ಅನುದಾನದ ವರ್ಷವಾರು ವಿವರ ಈ ಕೆಳಕಂಡಂತಿದೆ:

ಕ್ರಮ. ಸಂಖ್ಯೆ	ವರ್ಷ	ಆಯವ್ಯಯ ಅನುದಾನ	ನಿಗಧಿಪಡಿಸಿದ ಮತ್ತು ಮಂಜೂರಾದ ಮೊತ್ತ	ವೆಚ್ಚ
		ಕೋಟಿ	ಕೋಟಿ	ರೂ.
1.	1994-95	2.00	2.00	1,89,72,500
2.	1995-96	2.00	2.00	1,85,85,000
3.	1996-97	2.00	2.00	1,30,02,500
4.	1997-98	2.00	1.50	1,00,00,000

ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಅನುದಾನ.

25 (7)

ಶ್ರೀ ಡಿ.ಆರ್.ಪಾಟೀಲ್ (ಗದಗ್): ಮಾನ್ಯ ಪ್ರದೇಶಾಭಿವೃದ್ಧಿ ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಆಯವ್ಯಯದಲ್ಲಿ ಒದಗಿಸಲಾದ ಅನುದಾನಕ್ಕಿಂತ ಹೆಚ್ಚು ಅನುದಾನ ಒದಗಿಸಲಾಗುವುದೆಂಬ ಕಳೆದ ಆಯವ್ಯಯದ ಅಧಿವೇಶನ ಕಾಲದಲ್ಲಿ ಭರವಸೆಯನ್ನು ನೀಡಲಾಗಿದ್ದಿತು. ಅದರಂತೆ ಒದಗಿಸಲಾದ ಹೆಚ್ಚಿನ ಅನುದಾನ ಎಷ್ಟು?

ಆ) ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಮತ್ತು ಮಲೆನಾಡು ಅಭಿವೃದ್ಧಿ ಮಂಡಳಿಗಿಂತ ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ಅನುದಾನ ಕಡಿಮೆ ನೀಡಲಾಗಿದೆಯೇ? ಹಾಗಿದ್ದಲ್ಲಿ ಈ ತಾರತಮ್ಯ ನಿವಾರಿಸಲು ಯಾವ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ.ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು):

ಅ) ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಲಾದ ಅನುದಾನದ ವಿವರಗಳನ್ನು ಕೆಳಗೆ ನೀಡಲಾಗಿದೆ.